ಮೂಲ ದಾವಾ ನಂ. 29/2022

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 20-03-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎಮ್. ಎಸ್. ಬಿ. ವಕೀಲರಿಂದಃ**

ಎರಡು ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ನಿಪಿ. 33 ಮತ್ತು ನಿಪಿ. 34 ಎಂದು, ಎಸ್.ಎಸ್.ಎಲ್.ಸಿ ಅಂಕಪಟ್ಟಿಯನ್ನು ಹಾಜರುಪಡಿಸಿದ್ದು ನಿಪಿ. 35 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಮ್. ಡಿ. ಆರ್. ವಕೀಲರಿಂದಃ**

ನಿಪಿ. 33 ಮತ್ತು 34 ರ ದಾಖಲೆಗಳನ್ನು ತಯಾರಿಸುವ ಅಧಿಕಾರಿಗಳಿಗೆ ಯಾರು ಮಾಹಿತಿ ಕೊಟ್ಟಿದ್ದರು ಎಂದರೆ ಸಾಕ್ಷಿ ನಮ್ಮ ಸಂಬಂಧಿಕರು ಕೊಟ್ಟಿದ್ದು ಅವರು ಯಾರು ಎಂದು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನನ್ನು ಶಾಲೆಗೆ ನೇಮಕ ಮಾಡಿಸುವಾಗ ಶಾಲೆಯವರಿಗೆ ನನ್ನ ತಂದೆ ಮಾಹಿತಿ ಕೊಟ್ಟಿದ್ದರು. ನಿಪಿ. 33 ಮತ್ತು 34 ರ ದಾಖಲೆಗಳನ್ನು ಪಡೆಯಲು ನಾನೇ ಅರ್ಜಿ ಕೊಟ್ಟಿದ್ದೆ. ಸದ್ರಿ ದಾಖಲೆಗಳನ್ನು ಪಡೆಯಲು ಮುರುಡೇಶ್ವರ ಪಂಚಾಯತಿಯವರಿಗೆ ನಾನು ಅರ್ಜಿ ಕೊಟ್ಟಿದ್ದು ಯಾವಾಗ ಕೊಟ್ಟಿದ್ದು ಎಂದು ಈಗ ನೆನಪಿಲ್ಲ. ನನ್ನ ತಾಯಿಯ ಮರಣ ಪ್ರಮಾಣಪತ್ರಕ್ಕೆ ಸುಮಾರು 2 ವರ್ಷಗಳ ಹಿಂದೆ ಅರ್ಜಿ ಕೊಟ್ಟಿದ್ದು ನನ್ನ ತಂದೆಯ ಮರಣ ಪ್ರಮಾಣಪತ್ರ ಪಡೆಯಲು ಯಾವಾಗ ಅರ್ಜಿ ಕೊಟ್ಟಿದ್ದೆ ಎಂದು ಈಗ ನೆನಪಿಲ್ಲ. ಮುಸ್ಲಿಂ ಸಮುದಾಯದಲ್ಲಿ ರೆಹಮತ್‌ಉನ್ನೀಸಾ ಎಂಬ ಹೆಸರಿಗೆ ಅನೇಕ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ನಾನೇ 8 ನೇ ಪ್ರತಿವಾದಿಯ ಮಗ ಎನ್ನುವ ಕುರಿತು ನನ್ನ ಹತ್ತಿರ ಬೇರೆ ದಾಖಲೆ ಇರುವುದಿಲ್ಲ. 8 ನೇ ಪ್ರತಿವಾದಿಯ ತಂದೆ ಮೃತರಾದ ಬಗ್ಗೆ ನನಗೆ ಮಾಹಿತಿ ಇದೆ. ಅವರು ಯಾವ ಸ್ಥಳದಲ್ಲಿ ಮತ್ತು ಯಾವ ಇಸವಿಯಲ್ಲಿ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯ ತಾಯಿ ಆಕೆಯ ಗಂಡನಿಂದ ವಿಚ್ಛೇದನವನ್ನು ಪಡೆದಿದ್ದರಾ ಇಲ್ಲವಾ ನನಗೆ ಗೊತ್ತಿಲ್ಲ. ಮುಸ್ಲಿಂ ಸಂಪ್ರದಾಯದ ಪ್ರಕಾರ ಗಂಡ ಸತ್ತ ಇದ್ದತ್ ಸಮಯ ಆದ ಮೇಲೆ ಅಥವಾ ವಿಚ್ಛೇದನ ಪಡೆದ ಮೇಲೆ ಆಕೆ ಇನ್ನೊಂದು ಮದುವೆಯಾಗಬಹುದು ಎಂದರೆ ನನಗೆ ಗೊತ್ತಿಲ್ಲ. ಜಮಾತ್ ನಲ್ಲಿ ವಿವಾಹದ ಬಗ್ಗೆ ಮತ್ತು ವಿಚ್ಛೇದನವಾದ ಬಗ್ಗೆ ದಾಖಲೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಯಾಗಿದೆ. ನನ್ನ ಮದುವೆ ಜಮಾತ್ ನಲ್ಲಿ ಆಗಿದೆ. ಮದುವೆಯಾದ ಬಗ್ಗೆ ನಿಖಾನಾಮಾ ರೆಜಿಸ್ಟರಿನಲ್ಲಿ ನನ್ನ ಸಹಿ ಪಡೆದಿರುತ್ತಾರೆ. ನಿಪಿ. 35 ರಲ್ಲಿ ನನ್ನ ತಾಯಿಯ ಹೆಸರು ರೆಹಮತ್‌ಉನ್ನೀಸಾ ಎಂದು ಬರೆಯಲಾಗಿದ್ದು ಆಕೆ 8 ನೇ ಪ್ರತಿವಾದಿಯ ತಾಯಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**( 9 ನೇ ಪ್ರತಿವಾದಿಯ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಂಗೀಕರಿಸುತ್ತಾರೆ)**

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.